ಆಲಮಟ್ಟಿ ಜಲಾಶಯದ ನೀರಿನ ಪ್ರಮಾಣ ಮತ್ತು ನಿರಾಶ್ರಿತರ ಪುನರ್ವಸತಿ

2863 (3683) ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ):- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ವರ್ಷ ಆಲಮಟ್ಟಿ ಜಲಾಶಯದಲ್ಲಿ ನಿಲ್ಲಿಸಲಾಗುವ ನೀರಿನ ಪ್ರಮಾಣ ಎಷ್ಟು;

ಆ) ಇದೂವರೆಗೆ ಎಷ್ಟು ಅಡಿ ನೀರನ್ನು ನಿಲ್ಲಿಸಲಾಗಿದೆ;

ಇ) ಸುಪ್ರೀಂ ಕೋರ್ಟ್‌ನ ಆದೇಶಕ್ಕೆ ಅನುಗುಣವಾಗಿ ನೀರನ್ನು ನಿಲ್ಲಿಸಲಾಗಿದೆಯೇ;

ಈ) ಈ ವರ್ಷ ಬಾಗಲಕೋಟೆ ನಿರಾಶ್ರಿತರ ಪುನರ್ವಸತಿಗೆ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು ಮತ್ತು ಇದಕ್ಕಾಗಿ ನಿಗದಿಪಡಿಸಿರುವ ಹಣದ ಪ್ರಮಾಣ ಎಷ್ಟು?

ಶ್ರೀ ಹೆಚ್. ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :-

ಅ) 62.62 ಟಿ.ಎಂ.ಸಿ.ಗಳ (ಸಹಸ್ರ ಮಿಲಿಯನ್ ಘನ ಅಡಿಗಳು)

ಆ) ಆರ್.ಎಲ್. 1690 ರವರೆಗೆ (515.00 ಮೀಟರ್) ನೀರನ್ನು ನಿಲ್ಲಿಸಲಾಗಿದೆ.ಇ) ಹೌದು

ಈ) ಈ ಸಾಲಿನಲ್ಲಿ ಬಾಗಲಕೋಟೆ ಪಟ್ಟಣದ ನದಿತೀರದ ಪ್ರದೇಶದಲ್ಲಿ ನೀರಿನ ಮಟ್ಟ 516.30ಮೀ ರವರೆಗೆ ಏರಿದ್ದುದರಿಂದ 447 ಭಾದಿತ ಕುಟುಂಬಗಳನ್ನು ನವನಗರದಲ್ಲಿ ನಿರ್ಮಿಸಲಾದ ತಾತ್ಕಾಲಿಕ ಶೆಡ್ಡುಗಳಿಗೆ ಸ್ಥಳಾಂತರಿಸಲಾಗಿದೆ. ಇವರಿಗೆ ಆಹಾರ ವಿತರಣೆ ವೈದ್ಯಕೀಯ ಶುಶ್ರೂಷೆ ಮತ್ತು ಬಸ್ ಸೌಕರ್ಯವನ್ನು ಒದಗಿಸಲಾಗಿದೆ. 521 ಂಇ. ರವರೆಗಿನ ಭಾದಿತಗೊಳ್ಳಲಿರುವ ಎಲ್ಲಾ ಸಂತ್ರಸ್ಥರಿಗೆ 5689 ನಿವೇಶನಗಳನ್ನು ಹಂಚಲಾಗಿದೆ. ಮತ್ತು 3548 ಕಟ್ಟಡಗಳಿಗೆ ಈವರೆಗೆ ಪರಿಹಾರ ಧನ ನೀಡಲಾಗಿದೆ. ಬಾಗಲಕೋಟೆಯ ಪುನರ್ವಸತಿಯ ಕಾರ್ಯಕ್ರಮಕ್ಕಾಗಿ ಈ ವರ್ಷ 62.31 ಕೋಟಿ ರೂ. ಅನುದಾನ ಒದಗಿಸಲಾಗಿದೆ.

ರಾಜ್ಯದ ಕೆರೆಗಳ ಹೂಳು ತೆಗೆಯುವ ಕಾರ್ಯಕ್ರಮ

2864(3686) ಶ್ರೀ ಪಿ. ಜಿ. ಆರ್. ಸಿಂಧ್ಯ(ಕನಕಪುರ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಕೆರೆಗಳಲ್ಲಿನ ಹೂಳು ತೆಗೆಯಲು ಸರ್ಕಾರ ಹಾಕಿಕೊಂಡಿರುವ ಕಾರ್ಯ ಕ್ರಮಗಳೇನು;

ಆ) ಈ ವರ್ಷ ಎಷ್ಟು ಕೆರೆಗಳು ಹೂಳನ್ನು ಎತ್ತಲಾಗುವುದು; ಜಿಲ್ಲಾವಾರು ವಿವರಗಳನ್ನು ಕೊಡುವುದು;

ಇ) ಇದಕ್ಕಾಗಿ ನಿಗಧಿಪಡಿಸಿದ ಹಣ ಎಷ್ಟು; ಇದುವರೆಗೆ ವೆಚ್ಚವಾಗಿರುವ ಹಣ ಎಷ್ಟು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :-

ಅ) ಸಣ್ಣ ನೀರಾವರಿ ಇಲಾಖೆಯ ಆಯವ್ಯಯದಲ್ಲಿ ಕೆರೆಗಳ ಹೂಳು ತೆಗೆಯುವ ಕಾಮಗಾರಿಗಳಿಗೆ ರೂ. 360.00 ಲಕ್ಷ ಅನುದಾನ ಒದಗಿಸಲಾಗಿದೆ.